# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 21

ಸ್ವಾಮಿ ನಿತ್ಯಸ್ಥಾನಂದ



ಮಗುವು ತಂದೆಯ ಕೈಯನ್ನು ಹಿಡಿದುಕೊಂಡಿರುವುದು ನಮ್ಮ ಅಹಂಕಾರವನ್ನು ಸೂಚಿಸುತ್ತದೆ. ಸ್ವಪ್ರಯತ್ನದಿಂದಲೇ ಸಿದ್ಧಿಯನ್ನು ಪಡೆಯುತ್ತೇವೆ ಎಂಬ ಅಹಂಭಾವವನ್ನು ಸೂಚಿಸುತ್ತದೆ. ಮಗುವು ತಂದೆಯ ಕೈಹಿಡಿದುಕೊಂಡು ತಾನೂ ನಡೆಯುತ್ತದೆ. ಇಲ್ಲಿ ತಂದೆಯ ಗಮನ ಅದರ ಕಡೆಗೆ ಅಷ್ಟಿರುವುದಿಲ್ಲ. ಅಂದರೆ ಸಾಧಕನು ಭಗವಂತನನ್ನು ಆಶ್ರಯಿಸಿಕೊಂಡೇ ಸಾಧನೆ ಮಾಡುತ್ತಾನೆ. ಆದರೆ ಭಗವಂತನ ಕೃಪೆ ಇನ್ನೂ ಅವನ ಮೇಲೆ ಆಗಿರುವುದಿಲ್ಲ. ಯಾವಾಗ ತಂದೆಯೇ ಮಗುವಿನ ಕೈ ಹಿಡಿದಿರುತ್ತಾನೋ ಆಗ ತಂದೆಯು ಮಗುವಿನ ಜವಾಬ್ದಾರಿಯನ್ನು ಸಂಪೂರ್ಣ ವಹಿಸಿಕೊಂಡಿದ್ದಾನೆ ಎಂದರ್ಥ. ಹಾಗೆಯೇ ಭಗವಂತನ ಕೃಪೆ ಉಂಟಾಯಿತು ಎಂದರೆ ಆಗ ಭಕ್ತ ಸುರಕ್ಷಿತವಾಗಿ ಮುಂದುವರಿಯುತ್ತಾನೆ.

ಶ್ರೀರಾಮಕೃಷ್ಣರು ಹೇಳುತ್ತಾರೆ: ‘‘ಭಗವಂತನ ಕೃಪೆ ದೊರಕಿಸಿಕೊಳ್ಳಬೇಕಾದರೆ ಆದ್ಯಾಶಕ್ತಿರೂಪಿಣಿಯನ್ನು ಪ್ರಸನ್ನಳನ್ನಾಗಿ ಮಾಡಿಕೊಳ್ಳಬೇಕು.’’ ಹಾಯಿ ಹಡಗಿನ ಪಟ ತೆರೆದರೆ ಅನುಕೂಲವಾದ ಗಾಳಿಯ ಪ್ರಯೋಜನವನ್ನು ಪಡೆದು ಹಡಗನ್ನು ನಿರ್ದಿಷ್ಟ ದಿಕ್ಕಿನಲ್ಲಿ ನಡೆಸಿಕೊಂಡು ಹೋಗಬಹುದು. ಶ್ರೀರಾಮಕೃಷ್ಣರು ನೀಡುವ ಈ ಉದಾಹರಣೆಯ ಆಧಾರದ ಮೇಲೆ ಹೇಳುವುದಾದರೆ: ಈ ಜೀವನದ ಹಡಗು ಭವಸಾಗರದ ಮೇಲೆ ತೇಲುತ್ತಿದೆ, ಗಾಳಿಪಟ ತೆರೆಯದಿದ್ದರೆ ಹಡಗು ಎಲ್ಲೆಂದರಲ್ಲಿ ಸುತ್ತಾಡುತ್ತದೆ. ನಮ್ಮ ಮನಸ್ಸು ತೆರೆದರೆ ಕೃಪೆಯೆಂಬ ಗಾಳಿಯ ಪ್ರಯೋಜನ ಪಡೆಯಬಹುದು. ಆದ್ಯಾಶಕ್ತಿ ಪ್ರಸನ್ನಳಾದರೆ ಪಟ ತೆರೆಯುತ್ತದೆ. ಈ ರೀತಿ ಪಟ ತೆರೆಯುವುದನ್ನೇ ಆಧ್ಯಾತ್ಮಿಕ ಆದರ್ಶವೆನ್ನುವುದು. ಈ ಆದರ್ಶವನ್ನು ಗಂಭೀರವಾಗಿ ಸ್ವೀಕರಿಸಿದಾಗ ಭಗವತ್ ಕೃಪೆಯು ಸಾಧಕನನ್ನು ಮುಂದಕ್ಕೆ ಕರೆದುಕೊಂಡು ಹೋಗುತ್ತದೆ.

## ಎಲ್ಲ ಭಗವಂತನ ಲೀಲೆ

‘ಮ’ ಅವರಿಗೆ ಮನಸ್ಸಿನಲ್ಲಿಯೇ ಒಂದು ಆಲೋಚನೆ ಬರುತ್ತದೆ: ‘‘ಭಗವಂತ ನಮ್ಮ ಕೈಯಲ್ಲಿ ಸುತ್ತಿ ಬಳಸಾಡುವ ಹಾಗೆ ಏಕೆ ಮಾಡಿಸಬೇಕು?’’ ಶ್ರೀರಾಮಕೃಷ್ಣರು ಅವರ ಮನಸ್ಸಿನ ಭಾವನೆಯನ್ನು ಅರ್ಥಮಾಡಿಕೊಂಡು ಹೇಳಿದರು: ‘‘ನಾವು ಸ್ವಲ್ಪ ಸುತ್ತಿ ಬಳಸಾಡಬೇಕೆಂಬುದು ಆತನ ಇಚ್ಛೆ. ಆಗ ಒಂದು ತಮಾಷೆ ನೋಡಿದ ಹಾಗಾಗುತ್ತದೆ. ಆತ ತನ್ನ ಲೀಲೆಯಿಂದ ಈ ಸಂಸಾರ ಸೃಷ್ಟಿಸಿದ್ದಾನೆ. ಆತನ ಲೀಲಾಶಕ್ತಿಗೆ ಮಹಾಮಾಯೆ ಅಂತ ಹೆಸರು. ಅದಕ್ಕಾಗಿ ಆ ಶಕ್ತಿರೂಪಿಣಿ ತಾಯಿಯಲ್ಲಿ ಶರಣಾಗತಿ ಪಡೆಯಬೇಕು. ಆಕೆ ಮಾಯಾಪಾಶದಿಂದ ನಮ್ಮನ್ನು ಬಂಧಿಸಿ ಇಟ್ಟುಬಿಟ್ಟಿದ್ದಾಳೆ. ಈ ಪಾಶಗಳನ್ನು ಕತ್ತರಿಸಿ ಹಾಕಲು ಶಕ್ತರಾದರೆ ಮಾತ್ರ ನಮಗೆ ಭಗವಂತನ ದರ್ಶನ ದೊರೆಯುತ್ತದೆ.

ಇಡೀ ಪ್ರಪಂಚವೇ ಒಂದು ನಾಟಕರಂಗ. ನಾಟಕದ ದೃಶ್ಯವನ್ನು ನಾವು ಗಂಭೀರವಾಗಿ ಸ್ವೀಕರಿಸಲಾಗುವುದಿಲ್ಲ. ಸ್ವೀಕರಿಸಿದರೆ ಅನಾಹುತವಾಗುವ ಸಂಭವ ಹೆಚ್ಚು. ಗಿರೀಶಚಂದ್ರ ಘೋಷ್ ಅವರ ಒಂದು ನಾಟಕ ನಡೆಯುತ್ತಿತ್ತು. ಅದರಲ್ಲಿ ಗಿರೀಶರು ಖಳನಾಯಕರಾಗಿ ಒಬ್ಬ ಮಹಿಳೆಯ ಮೇಲೆ ದೌರ್ಜನ್ಯ ನಡೆಸುವ ದೃಶ್ಯ. ಅದರಲ್ಲಿ ಅವರು ಅದೆಷ್ಟು ಪರಿಣಾಮಕಾರಿಯಾಗಿ ನಟಿಸುತ್ತಿದ್ದರೆಂದರೆ, ಪ್ರೇಕ್ಷಕರ ಮಧ್ಯೆ ಕುಳಿತಿದ್ದ ಈಶ್ವರಚಂದ್ರ

ವಿದ್ಯಾಸಾಗರರು ಆ ದೃಶ್ಯವನ್ನು ಸಹಿಲಾಗದೆ ಕೋಪೋದ್ರಿಕ್ತರಾಗಿ, ''ಏನು ಮಾಡುತ್ತಿರುವೆ, ಬಿಡು ಅವಳನ್ನು'' ಎಂದು ಜೋರಾಗಿ ಕೂಗುತ್ತ ತಮ್ಮ ಚಪ್ಪಲಿಯನ್ನು ತೆಗೆದು ಗಿರೀಶರ ಕಡೆ ಎಸೆದರು. ಗಿರೀಶ್ ಅದನ್ನು ಕೈಗೆತ್ತಿಕೊಂಡು, ''ಇದು ನನ್ನ ಅಭಿನಯಕ್ಕೆ ಸಿಕ್ಕಿದ ಅಪೂರ್ವ ಬಹುಮಾನ '' ಎಂದು ತಲೆಗೊತ್ತಿಕೊಂಡರು. ಬೇರೆ ಯಾರಾದರೂ ಆಗಿದ್ದರೆ ದೊಡ್ಡ ಗಲಾಟೆಯೇ ಆಗಿಬಿಡುತ್ತಿತ್ತು. ನಾವು ಕೇವಲ ಪಾತ್ರಧಾರಿಗಳು ಎಂಬುದನ್ನು ಮರೆತು, ಈ ದೃಶ್ಯಗಳನ್ನೆಲ್ಲ ಗಂಭೀರವಾಗಿ ಸ್ವೀಕರಿಸುವುದರಿಂದ ನಾವು ಖೇದಕ್ಕೊಳಗಾಗುತ್ತೇವೆ. ಈ ಜೀವನ ನಾಟಕದಲ್ಲಿ ತಂದೆ, ತಾಯಿ, ಪುತ್ರ ಮುಂತಾದ ನಮ್ಮ ಪಾಲಿಗೆ ಬಂದ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಬೇಕು. ಮುಂದಿನ ಜನ್ಮದಲ್ಲಿ ಇನ್ನಾವುದೋ ಪಾತ್ರಗಳನ್ನು ನಿರ್ವಹಿಸಬೇಕಾಗಬಹುದು.

### ಮಾಯೆ ಎಂದರೇನು?

ಶ್ರೀರಾಮಕೃಷ್ಣರು: ''ಭಗವಂತನೇ ಒಂದು ರೂಪದಲ್ಲಿ ಮಹಾಮಾಯೆಯಾಗಿದ್ದಾನೆ. ಆಕೆ ಈ ಜಗತ್ತನ್ನು ಮುಗ್ಧ ಮಾಡಿ ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಿದ್ದಾಳೆ. ಆಕೆ ನಮ್ಮ ಕಣ್ಣಿಗೆ ಅಜ್ಞಾನವೆಂಬ ಮುಸುಕು ಹಾಕಿದ್ದಾಳೆ. ಆ ಮಹಾಮಾಯೆ ಬಾಗಿಲು ಬಿಟ್ಟುಕೊಟ್ಟರೆ ಮಾತ್ರ ಒಳಕ್ಕೆ ಪ್ರವೇಶ. ಹೊರಗಡೆಯೇ ಇದ್ದರೆ ಹೊರಗಿನ ವಸ್ತುಗಳನ್ನು ಮಾತ್ರ ನೊಡಬಹುದೇ ಹೊರತು ಒಳಗಿರುವ ಆ ಸಚ್ಚಿದಾನಂದ ಪುರುಷನನ್ನು ನೋಡಲಾಗುವುದಿಲ್ಲ. ಅದಕ್ಕಾಗಿಯೇ ಚಂಡೀಪುರಾಣದಲ್ಲಿ ಹೇಳಿದೆ, ಮಧುಕೈಟಭರ ವಧೆಯಾದಾಗ ಬ್ರಹ್ಮಾದಿ ದೇವತೆಗಳು ಮಹಾಮಾಯೆಯನ್ನು ಸ್ತೋತ್ರ ಮಾಡಿದರು ಎಂಬುದಾಗಿ.''

ಮಾಯೆ ಎಂಬ ಶಬ್ದಕ್ಕೆ ಎರಡು ಅರ್ಥಗಳಿವೆ: ಒಂದನ್ನು ಮತ್ತೊಂದಾಗಿ ತಿಳಿಯುವುದು – ಉದಾಃ ಹಗ್ಗವನ್ನು ಹಾವಾಗಿ ಕಾಣುವುದು. ಆತ್ಯಂತಿಕ ಸತ್ಯವಾದ ಪರಬ್ರಹ್ಮನನ್ನು ನಾಮ-ರೂಪಾತ್ಮಕ ಜಗತ್ತಾಗಿ ಕಾಣುವುದು, ಹಗ್ಗವನ್ನು ಹಾವಾಗಿ ಭ್ರಮಿಸುವುದು ಸ್ವಾಭಾವಿಕ, ಏಕೆಂದರೆ ಅವುಗಳಲ್ಲಿ ಸಾದೃಶ್ಯವಿದೆ. ಅಷ್ಟೇ ಅಲ್ಲದೆ ಅವೆರಡೂ ಬಾಹ್ಯ ನಾಮರೂಪಾತ್ಮಕವಾದ ವಸ್ತುಗಳು. ನಾಮ-ರೂಪಗಳಿಲ್ಲದ, ಚೈತನ್ಯ ಸ್ವರೂಪವಾದ, ಆನಂದ ಸ್ವರೂಪವಾದ ಪರಬ್ರಹ್ಮನಲ್ಲಿ ನಾಮರೂಪಾತ್ಮಕವೂ, ಜಡವೂ ದುಃಖಾತ್ಮಕವೂ ಆದ ಜಗದ್ವಸ್ತುವನ್ನು ಅಧ್ಯಾರೋಪಿಸುವುದು ಹೇಗೆ ಸಾಧ್ಯ ? ಸೂರ್ಯನಲ್ಲಿ ಕತ್ತಲೆಯನ್ನು ಕಾಣಲು ಸಾಧ್ಯವೆ? ಇದು ಅಸಾಧ್ಯವಾದರೂ ನಾವು ವ್ಯಾವಹಾರಿಕ ಜಗತ್ತನ್ನು ನೋಡುತ್ತಿರುವುದಂತೂ ವಾಸ್ತವ ಸಂಗತಿ. ಈ ಅಸಾಧ್ಯವು ಸಾಧ್ಯವಾಗಿರುವುದನ್ನೇ 'ಮಾಯೆ' ಎಂದು ಕರೆಯುವುದು. ಯುಕ್ತಿಯುಕ್ತವಾಗಿ ವಿವರಿಸಲಾಗದ ಈ ಪ್ರಕ್ರಿಯೆಯನ್ನೇ ಮಾಯೆಯೆನ್ನುವುದು. ಶ್ರೀಶಂಕರಾಚಾರ್ಯರು ತಮ್ಮದೇ ಕಾವ್ಯಮಯ ಭಾಷೆಯಲ್ಲಿ ಮಾಯೆಯನ್ನು ವಿವರಿಸುತ್ತಾರೆ:

**ಸನ್ನಾಪ್ಯಸನ್ನಾಪ್ಯುಭಯಾತ್ಮಿಕಾ ನೋ**
**ಭಿನ್ನಾಪ್ಯಭಿನ್ನಾಪ್ಯುಭಯಾತ್ಮಿಕಾ ನೋ ।**
**ಸಾಂಗಾಪ್ಯನಂಗಾಪ್ಯುಭಯಾತ್ಮಿಕಾ ನೋ**
**ಮಹಾದ್ಭುತಾಽನಿರ್ವಚನೀಯರೂಪಾ ॥**

*(ವಿವೇಕಚೂಡಾಮಣಿ, ೧೦೯)*

''ಮಾಯೆಯು ಸದ್ರೂಪವಲ್ಲ, ಅಸದ್ರೂಪವಲ್ಲ, ಸತ್-ಅಸತ್ ರೂಪವೂ ಅಲ್ಲ; ಭಿನ್ನವೂ ಅಲ್ಲ, ಅಭಿನ್ನವೂ ಅಲ್ಲ, ಭಿನ್ನಾ-ಭಿನ್ನವೂ ಅಲ್ಲ; ಅದು ಸಾವಯವವೂ ಅಲ್ಲ, ನಿರವಯವವೂ ಅಲ್ಲ, ಸಾವಯವ-ನಿರವಯವವೂ ಅಲ್ಲ; ಅದು ಅತ್ಯದ್ಭುತವಾದುದೂ, ಅನಿರ್ವಚನೀಯ ರೂಪವಾಗಿದೆ.'' ಈ ದೃಷ್ಟಿಯಿಂದಲೇ ಶ್ರೀರಾಮಕೃಷ್ಣರು ಇದೆಲ್ಲ ಭಗವಂತನ ಲೀಲೆ ಎಂದು ಹೇಳಿದರು. ಲೀಲೆ ಎಂದರೆ ಯುಕ್ತಿಯುಕ್ತವಾಗಿ ವರ್ಣಿಸಲಾಗುವುದಿಲ್ಲ ಎಂದರ್ಥ. ಇದೇ ಅರ್ಥದಲ್ಲಿಯೇ ಪಂಚದಶಿಕಾರರು, **ನ ಜಾನಾಮಿ ಕಿಮಪ್ಯೇತತ್ ಇತ್ಯಂತೇ ಶರಣಂ ತವ** — ''ಇದೇನೆಂದು ನನಗೊಂದು ಅರ್ಥವಾಗುತ್ತಿಲ್ಲ ಎಂದು ನೀನು ಶರಣಾಗಲೇಬೇಕು'' ಎಂದು ಕೈಚೆಲ್ಲುತ್ತಾರೆ.

ಮಾಯೆ ಎಂಬ ಶಬ್ದದ ಎರಡನೆಯ ಅರ್ಥ: ನಮ್ಮನ್ನು ಮೋಹಗೊಳಿಸಿ ಪ್ರಪಂಚಕ್ಕೆ ಬಂಧಿಸುವುದು. ಕೀಟಹಾರಿ ಸಸ್ಯವು ಕೀಟಗಳನ್ನು ತನ್ನೆಡೆಗೆ ಆಕರ್ಷಿಸಿಕೊಂಡು ಅವುಗಳನ್ನು ಬಂಧಿಸಿ ನುಂಗಿಬಿಡುತ್ತದೆ. ಇನ್ನೊಂದು ಅರ್ಥದಲ್ಲಿ, ನಾವು ಬಂಧನದಲ್ಲಿ ಇದ್ದೇವೆಂದು ತಿಳಿದುಕೊಂಡಿದ್ದೇವಲ್ಲ ಅದೇ ಮಾಯೆ – ಬೀಗ ಹಾಕಿದ ಜೈಲಿನಲ್ಲಿ ಇದ್ದ ಹಾಗೆ – ಇಷ್ಟಪಟ್ಟರೆ ಸುಲಭವಾಗಿ ಹೊರಗೆ ಬರಬಹುದು. ಆದರೆ ಜೈಲಿನ ಜೀವನಕ್ಕೆ ಒಗ್ಗಿಹೋಗಿರುತ್ತೇವೆ. ಗಣಿಯಲ್ಲಿ ಕೆಲಸ ಮಾಡುವವನೊಬ್ಬನಿಗೆ ಹುಚ್ಚು ಹಿಡಿದು, ಅವನನ್ನು ಹುಚ್ಚಾಸ್ಪತ್ರೆಗೆ ಸೇರಿಸಿದ್ದರು. ಕೆಲವು ತಿಂಗಳುಗಳ ನಂತರ ಅವನ ಸ್ನೇಹಿತನು ಅವನನ್ನು ನೋಡಲು ಹೋದನು. ಆಗಲೇ ಅವನು ಸ್ವಾಭಾವಿಕ ಸ್ಥಿತಿಯಲ್ಲಿ ಇದ್ದನು. ಅವನನ್ನು ಮಾತನಾಡಿಸಿ ''ಯಾವಾಗ ಗಣಿ ಕೆಲಸಕ್ಕೆ ಹಿಂದಿರುಗುತ್ತಿಯೆ?'' ಎಂದು ಸ್ನೇಹಿತನು ವಿಚಾರಿಸಿದನು. ಗಣಿಗಾರ: ''ಏನು! ಇಷ್ಟು ಒಳ್ಳೆಯ ಜಾಗ ಬಿಟ್ಟು ಆ ದರಿದ್ರ ಗಣಿ ಕೆಲಸಕ್ಕೆ ಬರಲು ನನಗೇನು ತಲೆ ಕೆಟ್ಟಿದೆಯೆ?''

ಮಂಗನನ್ನು ಹಿಡಿಯುವ ವಿಧಾನ: ಒಂದು ಕಿರಿದಾದ ಬಾಯಿಯಿರುವ ಮಡಕೆಯನ್ನು ಅದರ ಅರ್ಧ ಭಾಗದಷ್ಟು ಭೂಮಿಯಲ್ಲಿ ಹೂತು, ಅದರೊಳಗೆ ಒಂದಷ್ಟು ಕಾಳುಗಳನ್ನು ಹಾಕುತ್ತಾರೆ. ಮಂಗವು ಕಾಳಿನ ಆಸೆಯಿಂದ ಮಡಕೆಯೊಳಗೆ ಕೈತೂರಿಸಿ ಒಂದು ಮುಷ್ಟಿ ಕಾಳನ್ನು ಹಿಡಿದುಕೊಳ್ಳುತ್ತದೆ. ಈಗ ಕಾಳು ಸಮೇತ ಕೈಯನ್ನು ಹೊರತೆಗೆಯಲಾಗುವುದಿಲ್ಲ. ಜನರು ಅದನ್ನು ಹಿಡಿಯಲು ಬರುತ್ತಾರೆ. ಕಾಳನ್ನು ಹಾಗೆಯೇ ಬಿಟ್ಟರೆ ಅದು ಕೈಯನ್ನು ಹೊರತೆಗೆದು ತಪ್ಪಿಸಿಕೊಂಡು ಓಡಬಹುದು. ಆದರೆ

ಅದಕ್ಕೆ ಕಾಳನ್ನು ಬಿಡಲಾಗುವುದಿಲ್ಲ. ಹಾಗಾಗಿ ಬಂಧಿಸಲ್ಪಡುತ್ತದೆ. ಇದೇ ನಮ್ಮಲ್ಲಿರುವ ಬಂಧನಕ್ಕೆ ಕಾರಣ.

ಯಮನು ಜೀವಿಗಳನ್ನು ಹಿಡಿದುಕೊಂಡುಹೋಗಲು ಪಾಶವನ್ನು ತರುವುದಿಲ್ಲವಂತೆ. ಹಾಗೆ ತರಬೇಕಾದರೆ ಅವನು ತನ್ನ ರಾಜ್ಯದಲ್ಲಿ ಒಂದು ಹಗ್ಗದ ಬೃಹತ್ ಕಾರ್ಖಾನೆಯನ್ನೇ ತೆರೆಯಬೇಕಾಗಿರುತ್ತದೆ. ಅವನು ಹಾಗೇ ಬರಿಗೈಯಲ್ಲೇ ಬರುತ್ತಾನೆ. ಪ್ರತಿಯೊಬ್ಬರಲ್ಲಿಯೂ ಪಾಶ ಆಗಲೇ ಇದೆ, ಅದರಿಂದಲೇ ಯಮನು ಎಳೆದುಕೊಂಡು ಹೋಗುತ್ತಾನೆ. ಆ ಪಾಶವೇ ವ್ಯಾಮೋಹ! ಅದೇ ಮಾಯೆ.

ಶ್ರೀರಾಮಕೃಷ್ಣರು ಮಧುಕೈಟಭರ ಬಗ್ಗೆ ಪ್ರಸ್ತಾಪಿಸುತ್ತಾರೆ. ಇವರ ಕಥೆ 'ಚಂಡೀ' ಪುಸ್ತಕದಲ್ಲಿ ಬರುತ್ತದೆ. ವಿಷ್ಣುವು ನಿದ್ರೆ ಮಾಡುತ್ತಿದ್ದಾಗ ಅವನ ಕಿವಿಗಳಲ್ಲಿದ್ದ ಕೊಳೆಯಿಂದ ಈ ರಾಕ್ಷಸರು ಹುಟ್ಟುತ್ತಾರಂತೆ. ಮಧು ಎಂದರೆ ರಾಗ, ಏಕೆಂದರೆ ರಾಗವು ಸಿಹಿಯಾಗಿರುತ್ತದೆ. ಕೈಟಭ ಎಂದರೆ ಕಟುವಾಗಿರುವುದು (ಕಹಿ), ಅದೇ ದ್ವೇಷ. ಕಿವಿಗಳು ಎಂದು ಹೇಳಿರುವುದು ಎಲ್ಲ ಇಂದ್ರಿಯಗಳಿಗೂ ಅನ್ವಯಿಸುತ್ತದೆ. ನಾವು ಇಂದ್ರಿಯಗಳ ಮೂಲಕ ಎಲ್ಲ ಬಗೆಯ ವಿಷಯಗಳನ್ನೂ ಹೀರಿಕೊಳ್ಳುತ್ತೇವೆ. ಈ ಕೊಳೆಯೇ ಮಧುಕೈಟಭರನ್ನು ಸೃಷ್ಟಿಸುತ್ತದೆ. ಈ ರೀತಿ ಆಗುವುದು ನಾವು ನಿದ್ರಿಸುತ್ತಿದ್ದಾಗ. ನಾವು ಜಾಗ್ರತರಾಗಿರುವುದೇಕೆಂಬುದು ಇದರ ಅರ್ಥ. *(ನೋಡಿ, 'Worship of God as Mother', by Swami Jyotirmayananda)*

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



**ಶಿಷ್ಯ :** ಅಮ್ಮಾ, ಇಷ್ಟು ದಿನ ಕಳೆದು ಹೋಯಿತು, ನಾನೇನು ಪಡೆದೆ ?

**ಶ್ರೀಮಾತೆ :** ಶ್ರೀರಾಮಕೃಷ್ಣರು ನಿನ್ನನ್ನು ಎಲ್ಲ ಸಾಂಸಾರಿಕ ಜಂಜಾಟಗಳಿಂದ ಬಿಡಿಸಿ ತಂದು ಅವರ ಪಾದಪದ್ಮಗಳಲ್ಲಿಟ್ಟಿದ್ದಾರೆ. ಇದೇನು ಕಡಿಮೆ ಭಾಗ್ಯವೆ ? ಯೋಗೇನ್ (ಸ್ವಾಮಿ ಯೋಗಾನಂದರು) ಹೇಳುತ್ತಿದ್ದ, 'ಜಪ, ಧ್ಯಾನ ಮಾಡಲಿ, ಬಿಡಲಿ, ನನಗೆ ಸಂಸಾರದ ಯಾವ ಜಂಜಾಟವೂ ಇಲ್ಲವಲ್ಲ?' ಅಂತ. ನೋಡು, ನಾನು ರಾಧುವನ್ನು ಕಟ್ಟಿ ಕೊಂಡು ಮಾಯೆಗೊಳಗಾಗಿ ಎಷ್ಟೊಂದನ್ನು ಅನುಭವಿಸುತ್ತಿದ್ದೇನೆ !

**ಶಿಷ್ಯ :** ನಿರ್ಜನವಾದ ಯಾವುದಾದರೂ ಉದ್ಯಾನದಲ್ಲಿ ಇದ್ದುಕೊಂಡು ಕೆಲವು ದಿನ ಸಾಧನೆ ಮಾಡಬೇಕು ಅಂತ ನನಗೆ ಆಸೆಯಾಗುತ್ತಿದೆ.

**ಶ್ರೀಮಾತೆ :** ಇದೇ ಸಾಧನೆ ಮಾಡುವ ಸಮಯ. ಸಣ್ಣ ವಯಸ್ಸಿನಲ್ಲಿಯೇ ಸಾಧನೆ ಮಾಡಬೇಕು. ನೀನು ಮಾಡಿಯೇ ಮಾಡುತ್ತೀಯೆ. ಆದರೆ ಊಟ ಇತ್ಯಾದಿಗಳಲ್ಲಿ ವಿಶೇಷ ಗಮನ ಕೊಡು. ಯೋಗೇನ್ ಕಠೋರವಾದ ಸಾಧನೆ ಮಾಡಿ ಕೊನೆಗೆ ತುಂಬ ಕಷ್ಟಪಟ್ಟು ದೇಹತ್ಯಾಗ ಮಾಡಿದ.

**ಶಿಷ್ಯ :** ಎಲ್ಲವೂ ಭಗವಂತನ ಇಚ್ಛೆಗನುಗುಣವಾಗಿಯೇ ನಡೆಯುವುದಾದರೆ ಅವನೇಕೆ ಎಲ್ಲ ಬಂಧನಗಳನ್ನೂ ಕತ್ತರಿಸಲಾರ ?

**ಶ್ರೀಮಾತೆ :** ಭಗವಂತನ ಇಚ್ಛೆಯಾದರೆ ಅವನು ಎಲ್ಲ ಬಂಧನಗಳನ್ನೂ ಕತ್ತರಿಸಿ ಬಿಡುವನು. ನೋಡು–ಕರ್ಮದ ಫಲವನ್ನು ಶ್ರೀರಾಮಕೃಷ್ಣರೂ ಅನುಭವಿಸಬೇಕಾಯಿತು. ಅವರ ದೊಡ್ಡ ಅಣ್ಣ (ರಾಮಕುಮಾರ)ನಿಗೆ ಜ್ವರ ಬಂದಾಗ ಅವರು ನೀರು ಕುಡಿಯುತ್ತಿದ್ದುದನ್ನು ನೋಡಿದರು. ನೀರಿನ ಗ್ಲಾಸನ್ನು ಅವರಿಂದ ಸೆಳೆದುಕೊಂಡಾಗ ಅವರಣ್ಣ ಅಸಮಾಧಾನದಿಂದ, 'ನೀನು ಹೇಗೆ ನನಗೆ ನೀರು ಕುಡಿಯಲು ಬಿಡಲಿಲ್ಲವೋ, ಹಾಗೇ ನಿನಗೂ ನಿನ್ನ ಕೊನೆಗಾಲದಲ್ಲಿ ಏನೂ ತಿನ್ನಲಾಗದೆ ಹೋಗುವುದು' ಎಂದರು. ಆಗ ಶ್ರೀರಾಮಕೃಷ್ಣರು, 'ಅಣ್ಣಾ, ನಾನು ನಿನ್ನ ಒಳ್ಳೆಯದಕ್ಕಾಗಿಯೆ ಹೀಗೆ ಮಾಡಿದೆ. ನೀನು ನನಗೆ ಶಾಪ ಕೊಟ್ಟುಬಿಟ್ಟೆಯಲ್ಲ!' ಎಂದರು. ಆಗ ಅವರ ಅಣ್ಣ ಅಳುತ್ತ, 'ತಮ್ಮಾ, ನನ್ನ ಬಾಯಿಯಿಂದ ಇಂಥ ಮಾತು ಏಕೆ ಹೊರಬಂತೋ ಗೊತ್ತಿಲ್ಲ' ಎಂದರು. ನೋಡು, ಶ್ರೀರಾಮಕೃಷ್ಣರ ಕೊನೆಗಾಲದ ಅನಾರೋಗ್ಯದ ಸಮಯದಲ್ಲಿ ಅವರೂ ಕರ್ಮಫಲವನ್ನು ಅನುಭವಿಸಬೇಕಾಯಿತು. ಅವರಿಗೆ ಏನನ್ನೂ ತಿನ್ನಲಾಗುತ್ತಿರಲಿಲ್ಲ.... ಯಾವ ಕಾರಣದಿಂದ ಏನಾಗುತ್ತದೋ ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟ.

**ಶಿಷ್ಯ :** ಅಮ್ಮಾ, ಎಣಿಕೆ ಮಾಡುತ್ತ ಜಪ ಮಾಡಬಹುದೆ ?

**ಶ್ರೀಮಾತೆ :** ಎಣಿಸುತ್ತ ಜಪ ಮಾಡಿದರೆ ಎಣಿಕೆಯ ಕಡೆಗೇ ಗಮನವೆಲ್ಲ ಹೋಗುವುದು. ಎಣಿಕೆಯಿಲ್ಲದೆ ಹಾಗೆಯೇ ಜಪ ಮಾಡು.

*('ಶ್ರೀಶಾರದಾದೇವಿ ವಚನವೇದ', ಪು.೩೨೨-೨೪)*